# ಟ್ರಿಬ್ಯುನಲ್ ನೇಮಕ ನಿಯಮಗಳ ರದ್ದತಿಗೆ ಕೇಂದ್ರಕ್ಕೆ ಸುಪ್ರೀಂ ಆದೇಶ

**ಆದರೆ ಟ್ರಿಬ್ಯುನಲ್‌ಗಳ ಸದಸ್ಯರ ನೇಮಕ ಅಧಿಕಾರ ಸರ್ಕಾರಕ್ಕಿದೆ ಎಂಬುದು ಸರಿ**

**ಹಣಕಾಸು ಮಸೂದೆಯಾಗಿ ಕಾಯ್ದೆಯನ್ನು ಪಾಸು ಮಾಡಿದ ವಿಚಾರಣೆ ವಿಸ್ತೃತ ಪೀಠಕ್ಕೆ**

**ನವದೆಹಲಿ:** ದೇಶದ ವಿವಿಧ ವಿವಾದಗಳ ನ್ಯಾಯಾಧಿಕರಣಗಳ ಸದಸ್ಯರ ನೇಮಕಕ್ಕೆ ಸಂಬಂಧಿಸಿ, 2017ರ 'ಹಣಕಾಸು ಕಾಯ್ದೆ'ಯನ್ವಯ ರೂಪಿಸಿದ್ದ ನಿಯಮ ಸರ್ವೋಚ್ಚ ನ್ಯಾಯಾಲಯ ಬುಧವಾರ 'ರದ್ದುಪಡಿಸಿದೆ. 'ನ್ಯಾಯಾಧಿಕರಣಗಳ ಸದಸ್ಯರ ನೇಮಕ ಹಾಗೂ ನ್ಯಾಯಾಧಿಕರಣಗಳ ನಿಯಮ ರೂಪಿಸುವ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ ಎಂದು ಅದೇ ವರ್ಷ ರೂಪಿಸಲಾಗಿದ್ದ ನಿಯಮ ಸರಿ ಇದೆ' ಎಂಬ ತೀರ್ಪನ್ನು ಕೋರ್ಟ್ ನೀಡಿದೆ.

ನ್ಯಾಯಾಧಿಕರಣಗಳ ಸದಸ್ಯರ ನೇಮಕದ ಅಧಿಕಾರವನ್ನು ತನ್ನ ಬಳಿಯೇ ಇರಿಸಿಕೊಳ್ಳಲು ಕೇಂದ್ರ ಸರ್ಕಾರವು 'ಹಣಕಾಸು ಕಾಯ್ದೆ-2017'ರ ಅಡಿ ಕೆಲವು ನಿಯಮಗಳನ್ನು ಪಾಸು ಮಾಡಿಕೊಂಡಿತ್ತು. ಪರಿಚ್ಛೇದ 184 ಅಡಿ ಈ ನಿಯಮಗಳು ಪಾಸ್ ಆಗಿದ್ದವು. ಅಲ್ಲದೆ, ಹಣಕಾಸು ಮಸೂದೆ ಅಡಿ ಇದನ್ನು ಅಂಗೀಕರಿಸಲಾಗಿತ್ತು. ಹಣಕಾಸು ಮಸೂದೆ ಅಡಿ ಈ ಕಾಯ್ದೆ ಪಾಸ್ ಆಗಿದ್ದರಿಂದ ಇದಕ್ಕೆ ರಾಜ್ಯಸಭೆಯ ಅನುಮೋದನೆ ಬೇಕಿರದೇ ಕೇವಲ ಲೋಕಸಭೆಯ ಅನುಮೋದನೆಯೊಂದಿಗೆ ಮಸೂದೆ ಅಂಗೀಕಾರಗೊಂಡಿತ್ತು. ಇದನ್ನು ಪ್ರಶ್ನಿಸಿ ಕೆಲವರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಇದರ ವಿಚಾರಣೆ ನಡೆಸಿ, ಮಧ್ಯಂತರ ಆದೇಶ ನೀಡಿದ ಮುಖ್ಯ ನ್ಯಾಯಾಧೀಶ ನ್ಯಾ। ರಂಜನ್ ಗೊಗೋಯ್ ಅವರ ಪೀಠ, 'ನ್ಯಾಯಾಧಿಕರಣಗಳ ಸದಸ್ಯರ ನೇಮಕ ಅಧಿಕಾರ ಕೇಂದ್ರ ಸರ್ಕಾರಕ್ಕಿದೆ ಎಂದು 2017ರಲ್ಲಿ ತಂದ ನಿಯಮ ಸರಿಯಾಗಿದೆ. ಆದರೆ ಸದಸ್ಯರ ನೇಮಕಕ್ಕೆ ರೂಪಿಸಲಾದ ನಿಯಮಗಳು ಸರಿಯಿಲ್ಲ, ಹೀಗಾಗಿ ಈಗ ಹೊಸ ನಿಯಮ ರೂಪಿಸಬೇಕು' ಎಂಬ ಆದೇಶ ಹೊರಡಿಸಿತು. ಅಲ್ಲಿಯವರೆಗೆ ಈ ಮೊದಲು ಇದ್ದ ಹಳೆಯ ನಿಯಮಗಳ ಅನುಸಾರ ನ್ಯಾಯಾಧಿಕರಣಗಳ ಸದಸ್ಯರ ನೇಮಕವಾಗಬೇಕು ಎಂದು ಸೂಚಿಸಿದೆ.